# ಅಪರೂಪದ ಕಾನಕಾಲಟೆ

■ ಚಿತ್ರ ಬರಹ:
ಪ್ರಸಾದ್ ಮೈರ್ಕಳ





ಅರಣ್ಯ ಸಂಪತ್ತು ಭಾರತದ ಆಸ್ತಿ. ಈ ಸಂಪತ್ತು ಪ್ರಕೃತಿ ಸಮತೋಲನವನ್ನು ಕಾಪಾಡುತ್ತದೆ. ವಿನಾಶದ ಅಂಚಿನಲ್ಲಿರುವ ಕಾಡನ್ನು ಉಳಿಸಲು ಪ್ರಯತ್ನಿಸಬೇಕು ಎಂಬುದಕ್ಕೆ ಹಲವಾರು ಕಾರಣಗಳಿವೆ. ಕಾಡಿನಲ್ಲಿ ಎಲ್ಲವೂ ಇದೆ. ಆಳವಾಗಿ ಚಿಂತಿಸಿದರೆ ಕಾಡೇ ಎಲ್ಲವೂ. ಔಷಧೀಯ ಸಸ್ಯಗಳು, ಹಣ್ಣುಗಳು, ತರಕಾರಿಗಳು, ವನಸ್ಪತಿ, ಔಷಧ ಮರಗಳು, ಕಾಯಿಗಳು ಇತ್ಯಾದಿಗಳ ಸಾಲು ಸಾಲು.

ವನ್ಯಸಂಪತ್ತಿನ ಒಂದು ಭಾಗವಾದ ಒಂದು ಅಪರೂಪದ ಕಾಯಿಯೇ ಕಾನಕಾಲಟೆ. ಹೆಸರೇ ಸೂಚಿಸುವಂತೆ ಇದು ಸಾಧಾರಣ ಕಾಡಲ್ಲಿ ಬೆಳೆಯುವ ವಿಶಿಷ್ಟ ಕಾಯಿ. ನಾಡಿನಲ್ಲೂ ಬೆಳೆದರೆ ಆಗಬಹುದು.

ಬಳ್ಳಿಯಲ್ಲಿ ನೆಲ್ಲಿಕಾಯಿ ಗಾತ್ರದ ಬಿಳಿ ಬಣ್ಣದ ಕಾಯಿಗಳಾಗುತ್ತವೆ. ನೈಸರ್ಗಿಕವಾಗಿ ಬೀಜ ಪ್ರಸರಣದಿಂದ ತನ್ನಿಂದ ತಾನೇ ಹುಟ್ಟಿ ಬೆಳೆದು ಹತ್ತಿರದ ಮರಗಿಡಗಳಿಗೆ ಹಬ್ಬುತ್ತದೆ. ಸಾಧಾರಣವಾಗಿ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಕಾಯಿ ಬಿಡುತ್ತದೆ. ಸಾಧಾರಣ ನೆಲದಲ್ಲಿ ಗೊಬ್ಬರದ ಅಗತ್ಯವಿಲ್ಲದೆ ಸುಲಭದಲ್ಲಿ ಬೆಳೆಯುತ್ತದೆ. ಇತ್ತೀಚೆಗೆ ಹಳ್ಳಿಗಳಲ್ಲೂ ಅಪರೂಪವಾದ ಈ ಕಾಯಿಯು, ಪಟ್ಟಣದವರಿಗೆ ಸಿಗುವುದಂತೂ ಕಷ್ಟ ಸಾಧ್ಯ. ಇದರ ಉಪಯೋಗವನ್ನು ತಿಳಿದವರು ಇದಕ್ಕಾಗಿ ಹುಡುಕಿಕೊಂಡು ಹೋಗುವುದಿದೆ. ಇದರಿಂದ ಮಜ್ಜಿಗೆ ಹುಳಿ, ಸಾಂಬಾರನ್ನೂ ತಯಾರಿಸುತ್ತಾರೆ. ಈ ಹಣ್ಣಿನಿಂದ ತಯಾರಿಸುವ ಸಾಸಿವೆ ಊಟಕ್ಕೆ ಬಲು ರುಚಿ. ಕಾಯಿಯನ್ನು ಎರಡು ಭಾಗ ಮಾಡಿ ನೀರಲ್ಲಿ ಬೇಯಿಸಿ ಒಳಗಿನ ಬೀಜವನ್ನು ಬೇರ್ಪಡಿಸಿ ನಂತರ ಉಪಯೋಗಿಸಲಾಗುತ್ತದೆ. ಇದೊಂದು ಔಷಧೀಯ ವನಸ್ಪತಿಯೂ ಹೌದು.

ನಾವು ದಿನನಿತ್ಯ ತುಳಿದು, ಕಡಿದು ನಾಶಪಡಿಸುವ ಇಂತಹ ಅನೇಕ ಗಿಡಬಳ್ಳಿಗಳಿದ್ದರೂ ನಮಗೆ ಅದರ ಉಪಯೋಗ ತಿಳಿಯುವ ಕುತೂಹಲ ಕಡಿಮೆ. ಇಂತಹ ಸಸ್ಯ ಸಂಪತ್ತುಗಳ ಉಪಯೋಗದಿಂದ ಶರೀರಕ್ಕೆ ಹಾನಿಯಂತೂ ಇಲ್ಲ. ರಾಸಾಯನಿಕ ಬಳಕೆಯ ವಿಷಯುಕ್ತ ತರಕಾರಿಗಳನ್ನು ಬಳಸುವುದಕ್ಕಿಂತ ಹಳ್ಳಿಯ ಇಂತಹ ತರಕಾರಿಗಳನ್ನು ಬಳಸುವುದು ಆರೋಗ್ಯದ ದೃಷ್ಟಿಯಲ್ಲೂ ಒಳ್ಳೆಯದು.